**ದಿನಾಂಕಃ 27 .10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನನ್ನ ತಂದೆಯ ಹೆಸರು ಸಿಂಗರಿಗೌಡ ಉಃ ಮೋಗಣ್ಣ ಆಗಿರುತ್ತದೆ. ನಮಗೆ ಜಮೀನು ಬರಬೇಕು ಎಂದು ಕೋರಿ ದಾವೆ ಹಾಕಿರುತ್ತೇವೆ. ದಾವಾ ಆಸ್ತಿಯನ್ನು ನನ್ನ ತಂದೆ ಕ್ರಯಕ್ಕೆ ಪಡೆದಿದ್ದು ಸದರಿ ಜಮೀನನ್ನು ಪ್ರತಿವಾದಿ ನಮಗೆ ಬಿಟ್ಟು ಕೊಡಬೇಕೆಂದು ಕೋರಿ ದಾವೆ ಹಾಕಿರುತ್ತೇವೆ. ನನ್ನ ತಂದೆ 3 ಎಕರೆ ಜಮೀನನ್ನು ಕೊಂಡುಕೊಂಡಿದ್ದರು. ನನ್ನ ತಂದೆಯವರು ಸರ್ವೆ ನಂ.185 ರಲ್ಲಿ ಆಸ್ತಿಯನ್ನು ಕೊಂಡುಕೊಂಡಿರುತ್ತಾರೆ. ನನ್ನ ತಂದೆ ಕ್ರಯಕ್ಕೆ ಪಡೆದುಕೊಂಡಿದ್ದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

2. ದಾವಾ ಸ್ವತ್ತಿನ ದಕ್ಷಿಣದಿಂದ ಉತ್ತರ ದಿಕ್ಕಿನಲ್ಲಿ ನರಿಹಳ್ಳ ಎಂದು ಸಾಗುತ್ತದೆ ಎಂದರೆ ಸರಿ. ನರಿಹಳ್ಳ ಪ್ರತಿವಾದಿಗಳ ಜಮೀನಿನಲ್ಲಿ ಹರಿಯುತ್ತದೆ ಎಂದರೆ ಸಾಕ್ಷಿಯು ಸರ್ವೆ ನಂ.185 ರಲ್ಲಿ ಹರಿಯುತ್ತದೆ ಎಂದು ನುಡಿಯುತ್ತಾರೆ. ನರಸಿಂಹಯ್ಯ ನಾನು ಅಣ್ಣ ತಮ್ಮಂದಿರು ಎಂದರೆ ಸರಿ. ನಮ್ಮ  ಅಣ್ಣ ತಮ್ಮಂದಿರ ಮಧ್ಯೆ ಪಿತ್ರಾರ್ಜಿತ ಸ್ವತ್ತು ವಿಭಾಗವಾಗಿದೆ ಎಂದರೆ ಸರಿ. ಸದರಿ ವಿಭಾಗದಂತೆ ನನ್ನ ತಮ್ಮನಾದ ನರಸಿಂಹಯ್ಯ ಮಾವಿನ ತೋಪು ಇರುವ ಉತ್ತರ ದಿಕ್ಕಿಗೆ ಇದ್ದು ನಾನು ದಕ್ಷಿಣ ದಿಕ್ಕಿಗೆ ಇರುತ್ತೇನೆಂದರೆ ಸರಿ. ಸದರಿ ನರಸಿಂಹಯ್ಯ ರವರ ಉತ್ತರ ಭಾಗದ  ಜಮೀನಿನ ಉತ್ತರಕ್ಕೆ ಮೂಡಲಯ್ಯರವರು ಇರುತ್ತಾರೆ. ಸಾಕ್ಷಿ ಮುಂದುವರಿದು ಅವರು ಪೂರ್ವಕ್ಕೆ ಇರುತ್ತಾರೆ ಉತ್ತರಕ್ಕೆ ವಡ್ಲಪ್ಪ ಇರುತ್ತಾರೆ ಎಂದು ನುಡಿಯುತ್ತಾರೆ.

3. ಸರ್ವೆ ನಂ.185 ರಲ್ಲಿ ಸುಮಾರು 10 ರಿಂದ 11 ಗುಂಟೆ ಖರಾಬು ಇರುತ್ತದೆ. ಸದರಿ ದಾವಾ ಸ್ವತ್ತು ನನ್ನ ತಂದೆ ಖರೀದಿ ಮಾಡಿದ ಸ್ವತ್ತಾಗಿರುತ್ತದೆ. ಪ್ರಸ್ತುತ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದು ಬೆಳೆ ಬೆಳೆಯುತ್ತಿದ್ದಾರೆ. ಪ್ರತಿವಾದಿಗಳೇ ಕಂದಾಯ ಕಟ್ಟುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಪ್ರತಿವಾದಿಗಳು 20 ಗುಂಟೆ ಖರೀದಿಸಿದ್ದು ಆದರೆ ಖಾತೆ ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

4. ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿಗಳು ನನ್ನ ಹಾಗೂ ಪ್ರತಿವಾದಿಗಳ ಹೆಸರಿನಲ್ಲಿ ಇವೆ. ದಾವಾ ಸ್ವತ್ತು ನಿಖರವಾಗಿ ಎಲ್ಲಿ ಬರುತ್ತದೆಂದು ನನಗೆ ಗೊತ್ತಿರುತ್ತದೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ನನ್ನ ತಮ್ಮ ಹಾಗೂ ಕೆಂಚೇಗೌಡ ರವರ ಜಮೀನು, ಪಶ್ಚಿಮಕ್ಕೆ ನಾಗರಾಜು ರವರ ಜಮೀನು, ಉತ್ತರಕ್ಕೆ ಪ್ರತಿವಾದಿರವರ ಜಮೀನು ಹಾಗೂ ದಕ್ಷಿಣಕ್ಕೆ ನಮ್ಮದೇ ಜಮೀನು ಇರುತ್ತದೆ. ಸದರಿ ದಾವಾ ಸ್ವತ್ತನ್ನು ಹೊರತು ಪಡಿಸಿ ನನಗೆ ಬೇರೆ ಸ್ವತ್ತುಗಳು ಸಹ ಊರಿನಲ್ಲಿ ಇರುತ್ತದೆ. ಸದರಿ ದಾವಾ ಸ್ವತ್ತು ಹಾಗೂ ಉಳಿದ ಸ್ವತ್ತುಗಳಲ್ಲಿ ನಾನೇ ವ್ಯವಸಾಯ ಮಾಡುತ್ತೇನೆ. ರೇಷ್ಮೆ, ಭತ್ತ ಹಾಗೂ ರಾಗಿ ಬೆಳೆಯುತ್ತೇನೆ ಹಾಗೂ ವ್ಯವಸಾಯ ಮಾಡುವ ಸಾಮರ್ಥ್ಯ ಇರುತ್ತದೆ. ನಾನು ಯಾವಾಗಲೂ ವ್ಯವಸಾಯ ಮಾಡಿಕೊಂಡು ಊರಿನಲ್ಲೇ ಇರುತ್ತೇನೆಂದರೆ ಸರಿ.

5. ಪ್ರತಿವಾದಿಗಳು ದಾವಾ ಸ್ವತ್ತಿಗೆ ತೊಂದರೆ ಕೊಟ್ಟಾಗ ಪಂಚರನ್ನು ಸೇರಿಸಿ ಪಂಚಾಯತಿ ಮಾಡಿರುವುದಾಗಿ ನಾನು ಹೇಳಿದ್ದು ಸದರಿ ಪಂಚರು ಯಾರು ಎಂದರೆ ಸಾಕ್ಷಿಯು ಪಂಚರು ಯಾರನ್ನು ಸೇರಿಸಿಲ್ಲ, ಪೋಲೀಸರಿಗೆ ದೂರು ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಪೋಲೀಸರು ದೂರಿನ ಸಂಬಂಧ acknowlegement ಕೊಟ್ಟಿದ್ದು ಆದರೆ ಅದನ್ನು ನಾನು ಇಟ್ಟುಕೊಂಡಿಲ್ಲ. ಅವಶ್ಯಕತೆ ಬಿದ್ದರೆ ಸದರಿ ದಾಖಲೆಯನ್ನು ಹಾಜರು ಪಡಿಸಲು ಸಾಧ್ಯವಾ ಎಂದರೆ ಸಾಕ್ಷಿಯು ಆಗುವುದಿಲ್ಲ ಎಂದು ನುಡಿಯುತ್ತಾರೆ.

6. ಸಿದ್ಲೇಗೌಡ ಪ್ರತಿವಾದಿಗಳ ತಾತ ಆಗಬೇಕು. ಸದರಿ ಸಿದ್ದೇಗೌಡರು 1959 ರಲ್ಲಿ ಸರ್ವೆ ನಂ.185 ರಲ್ಲಿ 1 ಎಕರೆ ಖರೀದಿ ಮಾಡಿದ್ದರು ಎಂದರೆ ಸರಿ. ಅದೇ ರೀತಿ ಸಿದ್ಲೇಗೌಡ 1967 ರಲ್ಲಿ ಸರ್ವೆ ನಂ.185 ರಲ್ಲಿ 20 ಗುಂಟೆ ಖರೀದಿ ಮಾಡಿದ್ದರು ಎಂದರೆ ಸರಿ. ಸರ್ವೆ ನಂ.185 ರಲ್ಲಿ ಒಟ್ಟು 6 ಎಕರೆ 20 ಗುಂಟೆ ಇರುತ್ತದೆ. ಸದರಿ 6 ಎಕರೆ 20 ಗುಂಟೆಯಲ್ಲಿ ಪ್ರತಿವಾದಿಗಳ ತಾತನಾದ ಸಿದ್ಲೇಗೌಡ 1 ಎಕರೆ 20 ಗುಂಟೆಯನ್ನು ಖರೀದಿಸಿರುತ್ತಾರೆಂದರೆ ಸರಿ. ಪ್ರತಿವಾದಿಗಳಿಗೆ ಸದರಿ ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸಿದ್ಲೇಗೌಡರು ಖರೀದಿ ಮಾಡಿದ ದಿನದಿಂದ ಇಲ್ಲಿಯವರೆಗೂ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದಾರೆಂದರೆ ಸಾಕ್ಷಿಯು 2 ಎಕರೆ 10 ಗುಂಟೆಯಲ್ಲಿ ಪ್ರತಿವಾದಿಯರು

ಸ್ವಾಧೀನದಲ್ಲಿ ಇದ್ದಾರೆಂದು ನುಡಿಯುತ್ತಾರೆ. ದಾವಾ ಸ್ವತ್ತಿನ ವಿವರಣೆ ಬಗ್ಗೆ ನನಗೆ ಯಾವುದೇ ಸರಿಯಾದ ಮಾಹಿತಿ ಇಲ್ಲದೇ ಇದ್ದರೂ ಸಹಿತ ವಿನಾಕಾರಣ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ದ ದಾವೆ ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಸದರಿ ದಾವಾ ಸ್ವತ್ತಿನಲ್ಲಿ ರಾಗಿ, ಕಡಲೇಕಾಯಿ ಮತ್ತು ಇತರೆ ಬೆಳೆಗಳನ್ನು ಬೆಳೆಯುತ್ತಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಉಳುಮೆ ಮಾಡುತ್ತಿಲ್ಲ ಪ್ರತಿವಾದಿಗಳೇ ಮಾಡುತ್ತಿದ್ದಾರೆ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**